"ಎಲ್ಲಾ ಸೇರಿಯೇ ಮಾಡಿದ್ದು; ಎಲ್ಲರನ್ನೂ ಎಳೆದುಕೊಂಡೇ ಮುಳುಗುತ್ತೀನಿ. ಎಲ್ಲ ನಾನೇ ಹೇಳಿಬಿಡುತ್ತೇನೆ..."

***

ಸ್ಟೇಶನ್‌ನಲ್ಲಿ ಕುಳಿತಿದ್ದ ಅನಂತರಾಮಯ್ಯನ ಮುಂದೆ ಹ್ಯಾಂಡಿಕ್ಯಾಮ್‌ನ ಕೆಂಪು ದೀಪ ಆನ್ ಆಯಿತು.

"ನಾವೆಲ್ಲಾ ಒಂದು ಟೀಮ್... ನಂದಿನಿ ಮತ್ತು ಹಂಸಿನಿ ತಮ್ಮ ಸೌಂದರ್ಯ ಬಳಸಿ ಶ್ರೀಮಂತರನ್ನು ಬಲೆಗೆ ಬೀಳಿಸಿಕೊಂಡು ಅವರನ್ನು ಮದುವೆಯಾಗುತ್ತಿದ್ದರು. ಇಬ್ಬರಲ್ಲಿ ಒಬ್ಬರು ಹ್ಯಾಂಡಿಕ್ಯಾಪ್ ಎನ್ನುವ ನಾಟಕ ಆಡಿ, ಅವಳನ್ನು ನೋಡಿಕೊಳ್ಳುವವಳಾಗಿ ಮಂಗಳಾ ಅವರ ಮನೆ ಸೇರುತ್ತಿದ್ದಳು... ಕೆಲ ದಿನಗಳ ನಂತರ ಯಾರು ಹ್ಯಾಂಡಿಕ್ಯಾಪ್ ಆಗಿರುತ್ತಾರೋ ಅವರು ಆ ಶ್ರೀಮಂತನ ಮೇಲೆ ರೇಪ್ ಚಾರ್ಜಸ್ ಹಾಕಿ... ಅವರಿಂದ ದೊಡ್ಡ ಮೊತ್ತದ ಹಣ ವಸೂಲಿ ಮಾಡಿ ಮಾಯವಾಗುತ್ತಿದ್ದೆವು."

"ಬಾಳಿಗಾನನ್ನು ಯಾಕೆ ಕೊಲೆ ಮಾಡಿದಿರಿ?"

"ಬಾಳಿಗಾ ಮೇಲೂ ಅದೇ ಪ್ಲಾನ್ ಮಾಡಿದ್ದೆವು... ಹಂಸಿನಿಯನ್ನು ಅವನೊಂದಿಗೆ ಸಲಿಗೆಯಿಂದ ವರ್ತಿಸಲು ಬಿಟ್ಟು ಆಮೇಲೆ ದುಡ್ಡು ಕೀಳೋದು ಅಂತ. ಆದರೆ ಬಾಳಿಗಾ, ನಿಜವಾಗಿಯೂ ಹಂಸಿನಿಯನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದ. ಆದರೆ, ಒಮ್ಮೆ ಅವನಿಗೆ ನಮ್ಮ ನಾಟಕ ಗೊತ್ತಾಗಿ ಹೋಯ್ತು. ಆ ದಿನ ದೊಡ್ಡ ಜಗಳ ಆದಾಗ ಹಂಸಿನಿ ನನಗೆ ಕಾಲ್ ಮಾಡಿ ಕರೆದಳು. ನಂದಿನಿ ಮತ್ತು ಬಾಳಿಗಾರ ದೂಕಾಟದಲ್ಲಿ ಬಾಳಿಗಾ ತಲೆ ಸುತ್ತಿ ಕೆಳಕ್ಕೆ ಬಿದ್ದಿದ್ದ. ಅವನನ್ನು ಹಾಗೆಯೇ ಬಿಡುವುದು ಬೇಡ ಅಂತ ಶೂಟ್ ಮಾಡಿದೆ. ಗುಂಡು ತಾಕಿ ರಕ್ತ ಬಂತೇ ಹೊರತು ಬಾಳಿಗಾ ಸತ್ತಿರಲಿಲ್ಲ. ಚಿನ್ನ ಬೆಳ್ಳಿ ತೆಗೆದುಕೊಂಡು ಓಡಿಹೋಗೋಣ ಎನ್ನುವಷ್ಟರಲ್ಲಿ ಬಾಳಿಗಾ ಮತ್ತೆ ಎದ್ದು ನಿಂತ. ಅವನನ್ನು ಹಾಗೆಯೇ ಬಿಟ್ಟರೆ ಸಿಕ್ಕಿ ಹಾಕಿಸುತ್ತಾನೆ ಅಂತ ಮತ್ತೆರಡು ಗುಂಡು ಹಾರಿಸಿದೆ. ಆ ಕ್ಷಣದಲ್ಲಿ ನೆನಪಾಗಿದ್ದು ಬಾಳಿಗಾನ ಕೋಟ್ಯಂತರ ರೂಪಾಯಿಗಳ ಆಸ್ತಿ!

ಬಾಳಿಗಾ ಸತ್ತರೆ ಅವನ ಕೋಟ್ಯಂತರ ರೂಪಾಯಿ ಆಸ್ತಿ ಬರುತ್ತದೆ, ನಂತರ ಬೇರೆ ಯಾವ ಕೆಲಸವೂ ಬೇಡ ಅಂತ ನಂದಿನಿಗೆ ಈ ರೀತಿಯ ಕತೆ ಕಟ್ಟಲು ಹೇಳಿದೆ. ನಂದಿನಿ ನಿರಪರಾಧಿ ಅಂತ ಕೋರ್ಟ್‌ನಲ್ಲಿ ಪ್ರೂವ್ ಆದ್ರೆ ಮಾತ್ರ ಇನ್ಶೂರೆನ್ಸ್ ಮತ್ತು ಆಸ್ತಿ ಸಿಗುತ್ತದೆ ಅಂತ ಅವಳಿಗೆ ಕಟ್ಟು ಕತೆ ಕಟ್ಟಲು ಹೇಳಿದ್ದೆ. ಅವಳು ಕೊಲೆ ಮಾಡಿಲ್ಲ ಅಂತ ಮೊದಲು ಪೊಲೀಸರು ನಂಬಬೇಕು, ನಂತರ ಕೋರ್ಟ್ ನಂಬಬೇಕು ಅನ್ನುವ ಆಲೋಚನೆಯಿಂದ ಇಷ್ಟೆಲ್ಲಾ ನಾಟಕ ಮಾಡಿದೆವು."

ಅನಂತರಾಮಯ್ಯ ತಲೆ ತಗ್ಗಿಸಿದ. ಅವನ ತಪ್ಪೊಪ್ಪಿಗೆ ರೆಕಾರ್ಡ್ ಆಗಿತ್ತು. ಅದೇ ಸಮಯದಲ್ಲಿ ಬೇರೆ ಬೇರೆ ಕಡೆ ನಂದಿನಿ, ಹಂಸಿನಿಯ ತಪ್ಪೊಪ್ಪಿಗೆಯೂ ರೆಕಾರ್ಡ್ ಆಗಿತ್ತು.

"ಒಂದು ಮಾತು ಕೇಳಬೇಕಿತ್ತು ಸರ್..." ಅನಂತರಾಮಯ್ಯ ಮೆಲ್ಲಗೆ ಕೇಳಿದ.

"ನಿಮಗೆ ನಮ್ಮ ಬಗ್ಗೆ ಅನುಮಾನ ಹೇಗೆ ಬಂತು?"

ಭೂಷಣ್ ನಗುತ್ತಾ, "ನಿಮ್ಮ ಆಸೆ ಯಾವಾಗ ದುರಾಸೆ ಆಯಿತೋ ಆಗಲೇ ನಿಮ್ಮ ಅಪರಾಧ ಹೊರ ಬರಲು ದಾರಿ ಹುಡುಕಿತು. ಮಂಗಳಾ ತನ್ನ ಶೇರ್‌ನ ಹಣದಲ್ಲಿ ಕದ್ದ ಚಿನ್ನವನ್ನು ಕಡಿಮೆ ಬೆಲೆಯಲ್ಲಿ ತಗೊಳ್ಳಕ್ಕೆ ಶುರು ಮಾಡಿದ್ದಳು. ಅಚಾನಕ್ಕಾಗಿ ಸಿಕ್ಕ ಕಳ್ಳ ಬಾಯಿಬಿಟ್ಟ. ಮಂಗಳಾ ಮೊದಲೇ ತಪ್ಪೊಪ್ಪಿಗೆ ಕೊಟ್ಟಿದ್ದಳು. ಅದು ನಿಮ್ಮನ್ನೆಲ್ಲಾ ಅರೆಸ್ಟ್ ಮಾಡಲು ಸಾಕಾಗುತ್ತಿರಲಿಲ್ಲ. ನೀವು ಅಪರಾಧಿಗಳು ಎಂಬುದನ್ನು ಪ್ರೂವ್ ಮಾಡಲು ಬೇಕಾದಷ್ಟು ಎವಿಡೆನ್ಸ್ ಇವೆ. ಈ ಹಿಂದೆ ನೀವು ಮಾಡಿದ ಮೋಸಗಳ ಬಗ್ಗೆಯೂ ತನಿಖೆ ನಡೆಯುತ್ತಿದೆ. ಜೀವನಪೂರ್ತಿ ಜೈಲಿನಲ್ಲೇ ಕೊಳೆಯಲು ತಯಾರಾಗಿರಿ..." ಮುಖದಮೇಲೆ ನಗು ತುಂಬಿಕೊಂಡು ಒಳಗಡೆ ಬಂದ ಅಮಿತಾ ನೋಡಿ ಭೂಷಣ್, "ಬಾಳಿಗಾ ಕೊಲೆ ಕೇಸ್ ಸಾಲ್ವ್ ಮಾಡಿದೆ ಸಬ್ ಇನ್‌ಸ್ಪೆಕ್ಟರ್ ಅಮಿತಾ..."

ಅಮಿತಾ ಆಶ್ಚರ್ಯದಿಂದ ಭೂಷಣ್ ಕಡೆ ನೋಡಿದಳು.

"ಈ ಕೇಸ್ ಸಾಲ್ವ್ ಮಾಡಿದ್ದಕ್ಕಾಗಿ ಮುಂದಿನ ಪ್ರಮೋಶನ್ ಲಿಸ್ಟ್‌ನಲ್ಲಿ ನಿನ್ನ ಹೆಸರು ಸೇರಿಸಲಾಗಿದೆ."

●